ದಿನಾಂಕಃ 27-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು:-

ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದ :-

ದಿನಾಂಕ 17.02.2022 ರಂದು ಪ್ರತಿವಾದಿಗಳ ನಡುವೆ ದಾವಾ ಸ್ವತ್ತಿನ ಕುರಿತು ನೋಂದಾಯಿತ ವಿಭಾಗ ಪತ್ರ ಆಗಿದೆ ಎಂದರೆ ಸರಿ. ಸದರಿ ವಿಭಾಗದಲ್ಲಿ ದಾವಾ ಸ್ವತ್ತು 3 ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿದೆ ಎಂದರೆ ಸರಿ. ಅದೇ ರೀತಿ ಆತನ ಹೆಸರಿಗೆ ಖಾತೆ ಆಗಿ ಪಹಣಿ ಕೂಡ ಬಂದಿದೆ ಎಂದರೆ ಸರಿ. ಈಗ ದಾವಾ ಆಸ್ತಿಯ ಹೊಸ ನಂ.74/4 ಆಗಿದೆ ಎಂದರೆ ಸರಿ. 2 ನೇ ಪ್ರತಿವಾದಿಯ ಹೆಸರಿಗೆ ಬಂದ ಜಮೀನು ಸರ್ವೆ ನಂ.74/5 ಎಂದು ಆಗಿದೆ ಎಂದರೆ ಸರಿ. ದಿನಾಂಕ 09.05.2019 ರಂದು ದಾವಾ ಸ್ವತ್ತು ಪ್ರತಿವಾದಿಗಳ ಜಂಟಿ ಖಾತೆಯಲ್ಲಿ ಇತ್ತು ಎಂದರೆ ಸರಿ. ಆ ವೇಳೆಗಾಗಲೇ ಪ್ರತಿವಾದಿಗಳ ನಡುವೆ ವಿಭಾಗ ಆಗಿತ್ತು ಆದರೆ ದಸ್ತಾವೇಜು ಮಾತ್ರ ನೋಂದಣಿ ಆಗಿರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಎಲ್ಲರೂ ಒಟ್ಟು ಕುಟುಂಬದಲ್ಲಿ ಇದ್ದರು ಎನ್ನುತ್ತಾರೆ. 3 ನೇ ಪ್ರತಿವಾದಿಗೆ ಹಣಕಾಸಿನ ಅವಶ್ಯಕತೆ ಇದ್ದ ಕಾರಣ ಸಾಲಕ್ಕಾಗಿ ನನ್ನನ್ನು ಸಂಪರ್ಕಿಸಿದ್ದರು ಎಂದರೆ ಸರಿ. ಜಂಟಿ ಖಾತೆ ಇದ್ದ ಕಾರಣ ಎಲ್ಲಾ ಪ್ರತಿವಾದಿಗಳು ಒಟ್ಟಾಗಿ ಅಗ್ರಿಮೆಂಟ್ ಮಾಡಿಕೊಟ್ಟ ರು ಎಂದರೆ ಸರಿ. 2 ಮತ್ತು 1 ನೇ ಪ್ರತಿವಾದಿಗಳು 3 ನೇ ಪ್ರತಿವಾದಿಗೆ ಸಹಾಯ ಮಾಡಲು ಅಗ್ರಿಮೆಂಟ್ ಗೆ ಸಹಿ ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈಗ ದಾವಾ ಸ್ವತ್ತು 2 ನೇ ಪ್ರತಿವಾದಿಯ ಹೆಸರಿನಲ್ಲಿ ಇಲ್ಲ ಎಂದರೆ ಸಾಕ್ಷಿಯು ಎಲ್ಲರೂ ಒಟ್ಟು ಕುಟುಂಬದಲ್ಲಿ ಇದ್ದಾಗ ಅಗ್ರಿಮೆಂಟ್ ಮಾಡಿಕೊಟ್ಟಿದ್ದಾರೆ ಎನ್ನುತ್ತಾರೆ. ದಾವಾ ಸ್ವತ್ತು ಯಾರ ಹೆಸರಿನಲ್ಲಿ ಇದೆ ಇತ್ತೀಚಿನ ಪಹಣಿ ಪತ್ರಿಕೆ ನೋಡಿಲ್ಲ. 3 ನೇ ಪ್ರತಿವಾದಿಯ ದಾವಾ ಸ್ವತ್ತು ಇದೆ ಎಂದರೆ ಸಾಕ್ಷಿಯು ಸುಮ್ಮನೇ ನಿಲ್ಲುತ್ತಾರೆ. ಎಲ್ಲಾ ವಿಷಯ ಗೊತ್ತಿದ್ದರೂ ಕೂಡ ಕೇವಲ ತೊಂದರೆ ಕೊಡುವ ಉದ್ದೇಶದಿಂದ 2 ನೇ ಪ್ರತಿವಾದಿಯನ್ನು ಅನಾವಶ್ಯಕವಾಗಿ ದಾವೆಯಲ್ಲಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ **3** ನೇ ಪ್ರತಿವಾದಿ ಪರ ವಕೀಲರಿಂದ **:-**

ನಾನು ಮೂಲತಃ ಕುಡ್ಲೂರು ಗ್ರಾಮದ ವ್ಯಕ್ತಿ ಎಂದರೆ ಸರಿ. ನಮ್ಮ ಮನೆತನದ ಹೆಸರು ‘ಬಂಗಿಯವರ’ ಎಂದರೆ ಸರಿ. ಬಂಗಿಯವರ ನಂಜುಡಪ್ಪ ನನ್ನ ದೊಡ್ಡಪ್ಪ ಇರುತ್ತಾನೆ. ಶೇಖರಪ್ಪ ನನ್ನ ದೊಡ್ಡಪ್ಪನ ಮಗ ಆಗುತ್ತಾರೆ ಎಂದರೆ ಸರಿ. ದಾವಾ ಸ್ವತ್ತನ್ನು ನಾನು ನೋಡಿದ್ದೇನೆ. ಅದರ ಚಕ್ಕು ಬಂಧಿ ಹೇಳಲು ಬರುವುದಿಲ್ಲ. ಬಿ.ಎಸ್.ಶೇಖರಪ್ಪ ಇವರು ಹೇಳಿದ ಪ್ರಕಾರ ಅಗ್ರಿಮೆಂಟ್ ಆಗಿದೆ ಎಂದರೆ ಸರಿಯಲ್ಲ, ನಾನೇ ಮಾಡಿಕೊಂಡಿದ್ದೇನೆ.

ಅಗ್ರಿಮೆಂಟ್ ದಿವಸ ನಾನು 22 ಲಕ್ಷ ಚಿಲ್ಲರೆ ಹಣವನ್ನು ಕೊಟ್ಟಿದ್ದೇನೆ. ಅಡಿಕೆ ಮಾರಾಟ ಮಾಡಿ ಬಂದ ಹಣವನ್ನು ನಾನು ಪ್ರತಿವಾದಿಗಳಿಗೆ ಕೊಟ್ಟಿದ್ದೇನೆ.

(ಈ ಹಂತದಲ್ಲಿ ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ
ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.